ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 4, September-October 2025, Pp. 1-7
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಜನನ – ಜೀವನ ಕುರಿತ ತಾತ್ವಿಕತೆ ಮಂಡಿಸುವ ಬಾನು ಮುಷ್ತಾಕ್‌ರ 'ಸಾವು'

**ಡಾ. ಸಂಗಮೇಶ ಎಸ್. ಗಣಿ**

ಕನ್ನಡ ಪ್ರಾಧ್ಯಾಪಕರು, ಮಾನವಿಕ ವಿಭಾಗ, ಹೆಚ್.ಕೆ.ಬಿ.ಕೆ ತಾಂತ್ರಿಕ ಮಹಾವಿದ್ಯಾಲಯ, ಮಾನ್ಯತಾ ಟೆಕ್ ಪಾರ್ಕ್ ಎದುರು, ನಾಗವಾರ, ಬೆಂಗಳೂರು

***Abstract:***

*ಪ್ರತಿ ಜೀವಿಯ ಹುಟ್ಟು ನಿಸರ್ಗಸಹಜವಾದುದು. ಹುಟ್ಟು ನೋವುಜನ್ಯ. ಹೊಟ್ಟೆಯೊಳಗಿಂದ ಹುಟ್ಟಿದ ಜೀವಿಯ ಅನಂತರದ ಬದುಕು ಸುಖಾಪೇಕ್ಷಿತ. ನೋವು ನೀಗಿಕೊಂಡು ನಲಿವಿಗಾಗಿ ಹಂಬಲಿಸುವ ಮತ್ತು ಅದನ್ನೇ ಅದಮ್ಯ ಅಭಿಪ್ಸೆಯನ್ನಾಗಿಸಿಕೊಳ್ಳುವ ಯಾವುದೇ ಜೀವಿಯ ಜೀವನದಲ್ಲಿ ಸಾವು ಅನಿವಾರ್ಯ. ಹುಟ್ಟು–ಸಾವು ಕುರಿತ ಜಿಜ್ಞಾಸೆ ಇಂದು ನಿನ್ನೆಯದಲ್ಲ. ಸಾಹಿತ್ಯ ಪರಂಪರೆಯಲ್ಲಿ ಜನನ ಮರಣ ಮೋಕ್ಷ ಪರಿಕಲ್ಪನೆಗಳ ಬಗೆಗಿನ ಚಿಂತನೆ ಉದ್ದಕ್ಕೂ ನಡೆದುಕೊಂಡು ಬಂದಿದೆ. 'ಹುಟ್ಟು–ಸಾವ'ನ್ನು ಕುರಿತು ಕಥೆ, ಕಾದಂಬರಿ, ನಾಟಕ ಇತ್ಯಾದಿ ಕನ್ನಡ ಸೃಜನಶೀಲ ಸಾಹಿತ್ಯದ ಹಲವು ಪ್ರಕಾರಗಳು ಧ್ವನಿಸಿವೆ. ಸೃಜನಶೀಲ ಅಭಿವ್ಯಕ್ತಿಯ ಯಾವೆಲ್ಲ ಪ್ರಕಾರಗಳಲ್ಲಿ ಈ ಬಗೆಯ ಶೋಧನೆ, ಹುಡುಕಾಟ ನಿರಂತರ ಜಾರಿಯಲ್ಲಿದೆ. ಸಾವು ಒಪ್ಪಿತ ಸತ್ಯ. ಆದರೂ ಸಾವನ್ನು ಒಳಗೊಂಡೂ ಬದುಕುವ ಅದಮ್ಯ ಬಯಕೆ ಈ ಬದುಕಿಗೆ. ಪ್ರಸ್ತುತ ಲೇಖನದಲ್ಲಿ ಬಾನು ಮುಷ್ತಾಕ್ ಅವರು ಬರೆದಿರುವ 'ಸಾವು' ಕಥೆಯನ್ನು ಕೇಂದ್ರೀಕರಿಸಿಕೊಂಡು ಇಲ್ಲಿ ವಿಶ್ಲೇಷಿಸಲಾಗಿದೆ.*

***Keywords:*** *ಕನ್ನಡ ಸಾಹಿತ್ಯ, ಬಾನು ಮುಷ್ತಾಕ್, ಹುಟ್ಟು–ಸಾವು, ಜೀವನ–ಮರಣ, ಅಬ್ಬಾಜಾನ್*

## ಪೀಠಿಕೆ

ಮನುಷ್ಯನ ಪ್ರತಿಕ್ಷಣದ ತುಡಿತವೂ ಬದುಕುವುದಕ್ಕಾಗಿಯೇ ಇರುವುದು ವೇದ್ಯಸಂಗತಿ. ಈ ಜೀವನ ನಶ್ವರವಾದುದು ಎಂಬ ಸಿದ್ಧಸೂತ್ರದಂತೆ ಬದುಕುವ ಮನುಷ್ಯ ಮಾತ್ರ ಸಾವನ್ನು ಗೆಲ್ಲುವ, ಅದನ್ನು ದಾಟುವ ದಾರಿಗಳನ್ನು ಹುಡುಕುತ್ತಲೇ ನಡೆದು ಸಾವಿಗೆ ಶರಣಾಗುವ ವಾಸ್ತವ ಕಣ್ಣೆದುರಿಗಿದೆ. ಈ ನಡುವೆ ಹುಟ್ಟಿದ ಪ್ರತಿ ಜೀವಿಗೂ ಸಾವು ಅನಿವಾರ್ಯ. ಈ ಸತ್ಯ ಗೊತ್ತಿದ್ದರೂ, ಭರವಸೆಯನ್ನೇ ಆಶ್ರಯಿಸಿ ಬದುಕುವ ತನ್ಮೂಲಕ ಆಶಾವಾದವನ್ನು ಪ್ರಕಟಿಸುವ ಕತೆಗಳು ಕನ್ನಡ ಕಥಾ ಪರಂಪರೆಯಲ್ಲಿ ಕಾಣಸಿಗುತ್ತವೆ. ಬಾನು ಮುಷ್ತಾಕ್ ಅವರ ಹಲವು ಮಹತ್ವದ ಕಥೆಗಳಲ್ಲಿ 'ಸಾವು' ಕಥೆಯು ಹುಟ್ಟು ಮತ್ತು ಜೀವನ ತಾತ್ವಿಕತೆಯನ್ನು ಸಶಕ್ತವಾಗಿ ಮಂಡಿಸುತ್ತದೆ.

## ವ್ಯಾಪ್ತಿ

ಬಾನು ಮುಷ್ತಾಕ್ ಅವರು ಬರೆದ ಅನೇಕ ಕತೆಗಳಲ್ಲಿ 'ಸಾವು' ಕಥೆಯನ್ನು ಕೇಂದ್ರೀಕರಿಸಿಕೊಂಡು ಇಲ್ಲಿ ವಿಶ್ಲೇಷಿಸಲಾಗಿದೆ. ಕತೆಯ ವಸ್ತು 'ಸಾವು' ಮಾತ್ರ ಆಗಿರದೇ ಅದನ್ನೂ ಒಳಗೊಂಡು ಹುಟ್ಟು–ಬೆಳವಣಿಗೆ, ಜೀವನ ಕುರಿತು ಇಲ್ಲಿ ವಿವೇಚಿಸಲಾಗಿದೆ. ಹುಟ್ಟು–ಸಾವು, ಬದುಕು–ಭೀತಿ, ನೋವು–ನೀತಿ,

***Please cite this article as:*** ಸಂಗಮೇಶ ಎಸ್. ಗಣಿ. (2025). ಜನನ – ಜೀವನ ಕುರಿತ ತಾತ್ವಿಕತೆ ಮಂಡಿಸುವ ಬಾನು ಮುಷ್ತಾಕ್‌ರ 'ಸಾವು'. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(4), 1–7

ದಯೆ–ಧರ್ಮ, ಮಗಳಾದವಳ ಮನಸ್ಥಿತಿ, ಪರಿಸ್ಥಿತಿ ಮುಂತಾದ ಸಂಗತಿಗಳನ್ನು ಪ್ರಸ್ತಾಪಿಸುವ ಕಥೆಯನ್ನೇ ಮುಖ್ಯ ಭಿತ್ತಿಯನ್ನಾಗಿಸಿಕೊಂಡು ಇಲ್ಲಿ ಚರ್ಚಿಸಲಾಗಿದೆ. ಕಥೆಯೇ ಇಲ್ಲಿ ಕೇಂದ್ರ.

**ವೈಧಾನಿಕತೆ**

ಬಾನು ಮುಷ್ತಾಕ್ ಅವರ 'ಸಾವು' ಕಥೆಯನ್ನು ಅದರ ವಸ್ತು ವಿಶೇಷತೆಯೊಂದಿಗೆ ಭಾಷೆ, ನಿರೂಪಣೆ, ತಂತ್ರ ಇತ್ಯಾದಿ ಅಂಶಗಳನ್ನು ಪ್ರಾಯೋಗಿಕ ವಿಮರ್ಶಾ ಮಾದರಿಯನ್ನು ಅನುಸರಿಸಿ ವಿಶ್ಲೇಷಣೆಗೊಳಪಡಿಸಲಾಗಿದೆ. ಕಥೆಯ ಸಾರ ಸಂಗ್ರಹ, ಪಾತ್ರ ಪ್ರಪಂಚ, ವಸ್ತು ವಿನ್ಯಾಸ, ಜೀವನ ತಾತ್ವಿಕತೆ ಮುಂತಾದ ವಿಚಾರಗಳನ್ನು ಇಲ್ಲಿ ಚರ್ಚಿಸಲಾಗಿದೆ.

**ಕಥಾ ಸಾರಾಂಶ**

ಸಬಾ ತನ್ನ ತಂದೆಯ ಸಾವನ್ನು ಮರೆಯಲು ಆಗದೆ ಕಂಗೆಟ್ಟು ಚಿಂತಿಸಿ ಸಾವಿನ ಬಾಗಿಲಿನಲ್ಲಿ ನಿಂತು ತನ್ನ ಮಗ ನಾಹಿದ್‌ನಿಗಾಗಿ ಬದುಕುವ ಆಶಾವಾದವನ್ನು ವ್ಯಕ್ತಪಡಿಸುವುದೇ 'ಸಾವು' ಕಥೆಯ ವಸ್ತು. ಕೈತುಂಬ ದುಡಿಯುವ ಗಂಡ ನಿಜಾಮ್. ಸಂತೃಪ್ತರಾಗಿ ಬದುಕುವ ಮನೆಯ ಎಲ್ಲ ಹೆಣ್ಣುಮಕ್ಕಳು. ಎದೆಯುದ್ದ ಬೆಳೆದ ನಾಹಿದ್ ಹೀಗೆಲ್ಲ ಇರಬೇಕಾದರೂ ಸಬಾ ಮಾತ್ರ ತನ್ನ ತಂದೆಯ ಸಾವನ್ನು ಮರೆಯದೆ ಅದೇ ಚಿಂತೆಯಲ್ಲಿ ಕೊರಗುತ್ತಾಳೆ. ಗೊಂಡಾರಣ್ಯದ ರಮಣೀಯತೆ ಮತ್ತು ಭೀಕರತೆಯಿಂದ ಭಯಗ್ರಸ್ತಗೊಂಡ ಸಬಾ ಝರಿಯ ನೀರಿನ ರಭಸಕ್ಕೆ ಎದುರಾಗಿ ಭರವಸೆ ಕಳೆದುಕೊಳ್ಳದೆ, ಆಚೆ ದಡದ ದೂರದಲ್ಲಿರುವ ಕಮಂಡಲಧಾರಿ ಋಷಿಯ ಬಳಿ ಹೋಗುವ ಕನಸಿನೊಂದಿಗೆ ಕಥೆಯು ಪ್ರಾರಂಭವಾಗುತ್ತದೆ.

ಅಲ್ಲಿದ್ದ ಋಷಿ ಬೇರೆ ಯಾರೂ ಅಲ್ಲ, ಅವಳ ಅಬ್ಬಾಜಾನ್. ಕಾನನದ ಭಯಂಕರ ಭಯಕ್ಕೆ ಎದೆಗೊಡ್ಡಿ ಜೀವವನ್ನು ಕೈಯಲ್ಲಿ ಹಿಡಿದುಕೊಂಡು ನೀರಿನ ಪ್ರವಾಹ ದಾಟುತ್ತ ನಡೆಯುತಿರುವಾಗ "...ಹೆದರಬೇಡ ಮಗಳೇ...ಬಾ" ಎಂದು ಕರೆಯುತ್ತಾರೆ ಆ ಋಷಿರೂಪದ ಅಪ್ಪ ಅಬ್ಬಾಜಾನ್. ಅಪ್ಪನ ಅಂತಃಕರಣದ ಮಮತೆ ತುಂಬಿದ ಕಣ್ಣುಗಳನ್ನು ನೋಡಿ "ಈ ಕಣ್ಣುಗಳು ನನ್ನವೇ. ಅವು ನನ್ನ ಕಳೆದಹೋದ ಕಣ್ಣುಗಳು ಅಯ್ಯೋ..." ಎಂದು ಜೋರಾಗಿ ಕಿರುಚಿಕೊಳ್ಳುತ್ತಾಳೆ. ಮನೆಯಲ್ಲಿ ಮಂಚದ ಮೇಲೆ ಮಲಗಿಕೊಂಡು ಹೀಗೆ ಕನಸು ಕಂಡು ಕಿರುಚಿಕೊಳ್ಳುವ ಸಬಾಳನ್ನು ಗಂಡ ನಿಜಾಮ್ ನಿಧಾನವಾಗಿ ಸಮಾಧಾನಿಸಿ ಸಂತೈಸುವನು. "ಏನಾಯ್ತು ಸಬಾ... ಕಣ್ಣು ಬಿಡು... ಏನಾಗಿದೆ ನಿನಗೆ?" ಎಂದು ಕೇಳುವನು. ಆಗ ಸಬಾ ದಿಗ್ಭ್ರಾಂತಳಾಗಿ "ಹೌದು, ಏನಾಯಿತು ನನಗೆ?" ಎಂದು ತನ್ನನ್ನೇ ತಾನು ಪ್ರಶ್ನಿಸಿಕೊಳ್ಳುವಳು. ಆಗ 'ನಿಮ್ಮ ಮನೆಯಲ್ಲಿ ನಿನಗಿಂತ ಚಿಕ್ಕವರೆಲ್ಲ ನಿಮ್ಮ ತಂದೆಯ ಸಾವನ್ನು ಎದುರಿಸಿದಷ್ಟು ಸಹಜವಾಗಿ ತಾಳ್ಮೆಯಿಂದ ಗಂಭೀರವಾಗಿ ನೀವು ಎದುರಿಸಲಿಲ್ಲ. ನಿಮ್ಮ ಈ ಹುಚ್ಚಿನಿಂದಾಗಿ ನಮ್ಮ ಬದುಕುಗಳು ಏರುಪೇರಾಗಿವೆ..." ಎಂದು ನಿಜಾಮ್ ಹೆಂಡತಿಯ ಮತಿಭ್ರಮಣೆಗೆ ಮರುಗಿ ಅಸಮಾಧಾನ ಪ್ರಕಟಿಸುತ್ತಾನೆ.

ಅಪಾರವಾಗಿ ಪ್ರೀತಿ ಮಮತೆ ಹಂಚಿದ ಅಪ್ಪನ ಅಗಲಿಕೆಯಿಂದ ಮಗಳು ಸಬಾ ದಿಕ್ಕು ಕಾಣದಂತೆ ಚಡಿಪಡಿಸಿ ಚಿಂತಿತಳಾಗಿ "ನನಗೆ ಜನ್ಮ ಕೊಟ್ಟ ತಂದೆ, ಅಕ್ಷರ ಕಲಿಸಿದ ಗುರು, ಬಾಲ್ಯಕಾಲದ ಸ್ನೇಹಿತ, ಹದಿಹರೆಯದಲ್ಲಿ ಮಾರ್ಗದರ್ಶಕ, ವೈವಾಹಿಕ ಜೀವನವನ್ನು ಕಂಡು ಸಂತೋಷಿಸಿದವ, ಕಷ್ಟ–ಕೋಟಲೆಗಳಿಂದ ತಲ್ಲಣಿಸಿದಾಗ ಸದಾ ಧೈರ್ಯ ತುಂಬಿದವ, ಸ್ವಂತ ಉಸಿರು, ಭಾವ ಎಲ್ಲವೂ ಆಗಿದ್ದ ನನ್ನ ತಂದೆಯು ಈಗ ಇಲ್ಲ ಎಂದು ತಿಳಿದು ಬದುಕುವುದಾದರೂ ಹೇಗೆ...?" ಎಂದು ಚಿಂತೆಗೊಳಗಾಗುತ್ತಾಳೆ. ಎಲ್ಲ ಜಾತಿ ಜನಾಂಗಕ್ಕೂ ಬೇಕಾಗಿದ್ದ ಅಪ್ಪ ಸಾವಿನ ಮುಂಚೆ ಕುರಾನ್‌ನ ಶ್ಲೋಕವನ್ನು ಹೇಳಿದ್ದನ್ನು ನೆನಪಿಸಿಕೊಳ್ಳುವ ಸಬಾ "ಎಲ್ಲ ಕಾಲದಲ್ಲೂ ಎಲ್ಲ ದೇಶಗಳಲ್ಲೂ ಎಲ್ಲ

ಜನಾಂಗದಲ್ಲೂ ದೇವರು ಪ್ರವಾದಿಗಳನ್ನು ಕಳುಹಿಸಿದ್ದಾನೆ. ಮನುಷ್ಯರೆದುರು ಸತ್ಯದ ದೀವಟಿಗೆಯನ್ನು ಹಿಡಿಯಲು. ಸತ್ಯ ಯಾರೊಬ್ಬರ ಸ್ವತ್ತೂ ಅಲ್ಲ. ಮಾನವ ಜನಾಂಗ ಸೃಷ್ಟಿಯಾದಾಗಿನಿಂದ ಒಂದು ಲಕ್ಷ ಎಂಭತ್ತು ಸಾವಿರ ಪ್ರವಾದಿಗಳನ್ನು ಈ ಪ್ರಪಂಚಕ್ಕೆ ಕಳಿಸಿದ್ದಾನೆ ಎಂಬ ಉಲ್ಲೇಖವಿದೆ. ಕುರಾನ್‌ನ ಎಲ್ಲ ಪುಟಗಳನ್ನೂ ಅವಲೋಕಿಸಿದರೆ ಹಲವು ನೂರು ಪ್ರವಾದಿಗಳ ಹೆಸರು ನಮಗೆ ಕಂಡುಬರುತ್ತವೆ. ಇನ್ನುಳಿದ ಸಹಸ್ರ ಸಹಸ್ರ ಪ್ರವಾದಿಗಳು ಯಾರು? ಎಲ್ಲ ಜನಾಂಗಗಳ ಪ್ರವಾದಿಗಳೂ ಎಲ್ಲರಿಗೂ ಮಾನ್ಯರೇ? ಹಾಗಾದಲ್ಲಿ ಈ ರಕ್ತಪಾತಗಳೇಕೆ? ಈ ದ್ವೇಷಗಳೇಕೆ? ಸತ್ಯದ ಸ್ವರೂಪವನ್ನು ಒಪ್ಪಿಕೊಳ್ಳಲು ನಮಗೆ ಅಹಂಕಾರಗಳೇಕೆ? ಸತ್ಯವನ್ನು ನಾವು ಯಾಕೆ ನಿರಾಕರಿಸ್ತೀವಿ? ನಮ್ಮ ಸ್ವಾರ್ಥಗಳಿಗೋ... ನಮ್ಮ ಲಾಭಕ್ಕೋ ನಮ್ಮ ಅಹಂನ ತೃಪ್ತಿಗೋ...?" ಎಂಬುದು ಅವರ ಆಳದ ತತ್ವಜ್ಞಾನ. ಇದನ್ನೆಲ್ಲ ನೆನೆಯುತ್ತ ತನ್ನ ತಂದೆ ಸತ್ತದಿನವನ್ನು ಹಾಗೂ ಸಂಸ್ಕಾರದ ಕ್ಷಣಗಳನ್ನು ಕಣ್ಣೆದುರು ತಂದುಕೊಂಡು ದುಃಖಿತಳಾಗುತ್ತಾಳೆ ಸಬಾ. ತಂದೆಯ ಸಾವು ತೀವ್ರವಾಗಿ ಕಾಡಿ ಸಬಾಳನ್ನು ಇನ್ನಿಲ್ಲದ ರೋಗಬಾಧೆಗೊಳಪಡಿಸಿತು. ವೈದ್ಯರೂ ಇವಳ ರೋಗವನ್ನು ಪತ್ತೆ ಮಾಡದೇ 'ಮೆಂಟಲ್ ವರಿ' ಎಂದು ಕೈಚೆಲ್ಲುತ್ತಾರೆ.

ಒಂದು ದಿನ ತಾನು ಮತ್ತು ತನ್ನ ಅಬ್ಬಾಜಾನ್ ಸಲಾಮ್ ಭಾಯಿಯ ಕಾಲುಮೂಳೆ ಮುರಿತಕ್ಕೆ ಚಿಕಿತ್ಸೆಗೆಂದು ಆಸ್ಪತ್ರೆಗೆ ಹೋಗಿದ್ದರು. ಅಲ್ಲಿ ಹದಿನಾರು ವರ್ಷದ ಹುಡುಗಿಯೊಬ್ಬಳು ಮೂತ್ರಪಿಂಡ ಕಾಯಿಲೆಯಿಂದ ಬಳಲಿ ಸುಸ್ತಾಗಿ ಸತ್ತು ಹೋಗುವುದನ್ನು ಕಣ್ಣಾರೆ ಕಂಡಾಗ ಅಪ್ಪ ಸಾವು–ನೋವಿನ ಕುರಿತ ಕ್ರೂರ ವಾಸ್ತವನ್ನು ಮನವರಿಕೆ ಮಾಡಿಕೊಟ್ಟಿದ್ದರು. ಸಾವಿನ ಭಯಾನಕತೆ ಮತ್ತು ಅದರ ಸ್ವೀಕಾರತೆಯ ಅನಿವಾರ್ಯ ಸತ್ಯವನ್ನು ಮಗಳಿಗೆ ಅಬ್ಬಾಜಾನ್ ತಿಳಿಸಿಕೊಟ್ಟಿದ್ದರು. ಅದನ್ನೆಲ್ಲ ನೆನೆದುಕೊಂಡು ಕಣ್ಣೀರಾಗಿ ಮಂಕಾಗಿ; ಅನಾರೋಗ್ಯದಿಂದ ಬಳಲುತ್ತಿದ್ದ ಸಬಾಳನ್ನು ತೋರಿಸಲು ಬೆಂಗಳೂರಿನ ಆಸ್ಪತ್ರೆಗೆಂದು ಕರೆದುಕೊಂಡು ಹೋಗುವ ಸಂಬಂಧ ಮಗ ನಾಹಿದ್ ಆಟೋ ತರುವನು. ಅಷ್ಟರಲ್ಲಿ ಮನೆಯ ಹೊರಗೆ ಬಸ್ ರೆಡಿಯಿತ್ತು. ಬಸ್‌ನಲ್ಲಿ ಕುಳಿತುಕೊಳ್ಳುತ್ತಿದ್ದಂತೆಯೇ ವಾಂತಿ ಶುರುವಾಗಿ ತೀವ್ರ ವೇದನೆ ಅನುಭವಿಸುತ್ತ ತಂದೆಯಾಡಿದ ಪ್ರತಿ ಮಾತುಗಳನ್ನು, ತೋರಿದ ಪ್ರೀತಿ ವಾತ್ಸಲ್ಯ ಮಮತೆಯನ್ನು ನೆನೆದುಕೊಂಡು ಸಂಕಟಪಡುತ್ತಿದ್ದಾಗಲೂ ತಾಯಿಯ ಸ್ಥಿತಿ ಕಂಡು ಬಿಕ್ಕಳಿಸುತ್ತಿದ್ದ ಮಗ ನಾಹಿದ್‌ನನ್ನು ಮಡಿಲಲ್ಲಿ ಮಲಗಿಸಿಕೊಂಡು "ಅಬ್ಬಾ... ನಾಹಿದ್‌ನನ್ನು ಸದ್ಯಕ್ಕೆ ಅನಾಥನನ್ನಾಗಿ ಮಾಡಲಾರೆ. ನನ್ನಂತೆ ಅವನನ್ನು ಪ್ರತಿಗಳಿಗೆಯಲ್ಲೂ ಸಾಯಿಸಲಾರೆ. ನನಗೆ ನಿಮ್ಮ ಅವಶ್ಯಕತೆಗಿಂತ ಅವನಿಗೆ ನನ್ನ ಅಗತ್ಯ ಹೆಚ್ಚಿದೆ... ಖುದಾ ಹಾಫೀಜ್" ಎಂದು ಸಬಾ ಹೇಳುವ ಮೂಲಕ ಕಥೆಯು ಕೊನೆಗೊಳ್ಳುತ್ತದೆ.

**ಕಥಾ ವಿಶ್ಲೇಷಣೆ**

ಬಾನು ಮುಷ್ತಾಕ್ ಅವರು ಮುಸ್ಲಿಂ ಸಂವೇದನೆ, ಸ್ತ್ರೀಸಂವೇದನೆಗಳನ್ನು ತಮ್ಮ ಬರವಣಿಗೆಯಲ್ಲಿ ಪ್ರಕಟಿಸುತ್ತ ಬಂದಿರುವುದರ ಜೊತೆಗೆ ಮಾನವನ ಅನಾದಿ ಕಾಲದ ಜಿಜ್ಞಾಸೆಗೆ ಕಾರಣವಾದ 'ಸಾವ'ನ್ನು ಕುರಿತು ಬದುಕಿನ ಆಶಾವಾದದ ಮೂಲಕ ಈ ಕಥೆಯಲ್ಲಿ ಮುಖಾಮುಖಿಯಾಗಿದ್ದಾರೆ. ತಮ್ಮ ಅಪ್ಪ ಅಬ್ಬಾಜಾನ್ ಎಲ್ಲ ಜಾತಿ ಜನಾಂಗಕ್ಕೂ ಬೇಕಾದ ಮನುಷ್ಯರಾಗಿದ್ದರು ಎಂಬುದನ್ನು ಸಬಾ ನೆನಪಿಸಿಕೊಳ್ಳುವ ಮೂಲಕ ಸಾವಿನ ಧ್ಯಾನ ನಡೆಸಿದ್ದಾಳೆ. ಕುಟುಂಬ, ತಂದೆ–ಮಗಳು, ತಾಯಿ–ಮಗ, ಗಂಡ–ಹೆಂಡತಿ, ಸಾವು–ನೋವು, ಜಾತಿ–ಧರ್ಮ ಈ ಸಂಗತಿಗಳನ್ನು ಪ್ರಸ್ತಾಪಿಸುವ ಕಥೆಯು ಜೀವನದ ಸಾರ್ವಕಾಲಿಕ ಸತ್ಯವನ್ನು ಮತ್ತು ಸಾವಿನ ಅನಿವಾರ್ಯತೆಯ ವಾಸ್ತವವನ್ನು ಪ್ರತಿಪಾದಿಸುತ್ತದೆ. ಇಲ್ಲಿ ಸಬಾ ಅಬ್ಬಾಜಾನ್‌ನನ್ನು ಕಮಂಡಲ ವೇಷಧಾರಿ

ಋಷಿಯ ವೇಷದಲ್ಲಿ ಕಂಡಿರುವುದೇ ಜಾತ್ಯತೀತ ಮನಸ್ಥಿತಿಯ ಸಂಕೇತ. ತಂದೆ ಮತ್ತು ಮಗಳ ನಡುವಿನ ಸಂವಾದ ಸ್ವರೂಪದಲ್ಲಿಯೇ ಕಥೆ ಬಿಚ್ಚಿಕೊಳ್ಳುತ್ತ, ಬೆಳೆಯುತ್ತದೆ. ಜೀವನದ ಕಷ್ಟ–ಕಾರ್ಪಣ್ಯ, ಎಡರು–ತೊಡರು, ತೊಂದರೆ–ತಾಪತ್ರಯಗಳನ್ನು ನಿರ್ಭಯವಾಗಿ ಎದುರಿಸಬೇಕು. ಸಾವನ್ನು ಎದುರಿಸುವುದೂ ಸಹ ಈ ಎಲ್ಲ ಸಮಸ್ಯೆಗಳ ಒಂದು ಭಾಗವಷ್ಟೇ. ಸಾವನ್ನು ಎದುರಿಸಲು ಮಾನಸಿಕ ಸಿದ್ಧತೆ ಅವಶ್ಯ. ಧರ್ಮಗ್ರಂಥಗಳು ಬೋಧಿಸಿರುವ ಮೋಕ್ಷ ಮುಕ್ತಿ ಪರಿಕಲ್ಪನೆಗಳು ಸಾವಿನ ಶಾಶ್ವತ ಸತ್ಯವನ್ನು ಸಾರುತ್ತವೆ ಎಂಬ ಅಂಶವನ್ನು ಕಥೆ ದಾಖಲಿಸುತ್ತದೆ.

"ಬಾನು ಮುಷ್ತಾಕ್ ಅವರ ಕಥಾ ಜಗತ್ತಿಗೆ ಪ್ರವೇಶಿಸಿದರೆ ಮುಸ್ಲಿಂ ಲೋಕದ ಪಿತೃಪ್ರಧಾನ ಸಮಾಜದ ಗಂಡಿನ ಧ್ವನಿ ಢಾಳಾಗಿ ಕೇಳಿಸುತ್ತದೆ"[1] ಎಂಬ ಮಾತು ಅವರ ಬಹುತೇಕ ಕಥೆಗಳಿಗೆ ಒಪ್ಪಿತವಾದರೂ ಈ ಕಥೆಯ ಮಟ್ಟಿಗೆ ಅನ್ವಯಿಸಲಾಗದು. ಬಾನು ಮುಷ್ತಾಕ್ ಅವರು ಪುರುಷವಿರೋಧಿ ನಿಲುವುಗಳನ್ನು, ಪ್ರತಿರೋಧವನ್ನು ತಮ್ಮ ಕತೆಗಳಲ್ಲಿ ತೀವ್ರವಾಗಿ ದಾಖಲಿಸುತ್ತ ಬಂದಿದ್ದಾರೆ ಎಂಬುದನ್ನು ಈ ಕಥೆಯ ಮಟ್ಟಿಗೆ ಒಪ್ಪಲಾಗದು. ತಂದೆಯನ್ನೇ ತಮ್ಮ ಜೀವನದ ಉಸಿರು, ಭಾವವಾಗಿ ತನ್ನ ಬದುಕಿಗೆ ಪ್ರೇರಕಶಕ್ತಿಯಾಗಿ ಪಡೆದುಕೊಂಡಿರುವ ಸಬಾಳ ಪಾಲಿಗೆ ಸರ್ವಸ್ವವೂ ಅವರೇ. ಜೀವನದ ಎಲ್ಲ ಪಾಠಗಳನ್ನು ಹೇಳಿಕೊಟ್ಟ ಗುರು, ಮಾರ್ಗದರ್ಶಕರಾಗಿದ್ದ ಅಬ್ಬಾಜಾನ್ ಸಬಾಳ ದೃಷ್ಟಿಯಲ್ಲಿ ದಿಗ್ದರ್ಶಕ, ದಾರ್ಶನಿಕ. ಅಲ್ಲದೇ ಗಂಡ ನಿಜಾಮ್, ಮಗ ನಿಹಾದ್ ಯಾರೂ ಇಲ್ಲಿ ಸ್ತ್ರೀವಿರೋಧಿ ಪಾತ್ರಗಳಾಗಿ ಚಿತ್ರಿತಗೊಂಡಿಲ್ಲ ಎಂಬುದು ಗಮನಾರ್ಹ.

ಅಪ್ಪನ ಬೋಧೆ ಮಗಳ ನೆನಹಿನಲ್ಲಿ ಜೀವಪಡೆಯುತ್ತದೆ. ಅವರಿಬ್ಬರ ನಡುವಿನ ಸಂಭಾಷಣೆಯು ಓದುಗರನ್ನು ಹುಟ್ಟು ಸಾವು ನೋವು ಕುರಿತು ಜಿಜ್ಞಾಸೆಗೆ ತೊಡಗಿಸುತ್ತದೆ. ಆಸ್ಪತ್ರೆಯಲ್ಲಿ ಹದಿನಾರು ವರುಷದ ಹುಡುಗಿ ಮೂತ್ರಪಿಂಡ ಕಾಯಿಲೆಯಿಂದ ನರಳುತ್ತಿದ್ದುದು, ಸಾವಿನ ಕದ ತಟ್ಟುತ್ತಿದ್ದುದು, ಅವಳ ತಾಯಿಯ ಸಂಕಟ, ಮನೆಯವರ ದುಃಖ ಇದೆಲ್ಲವನ್ನೂ ನೋಡಿದ ಸಬಾಳಲ್ಲಿ ಸಾವಿನ ಬಗ್ಗೆ ರಚ್ಚು ಹುಟ್ಟಿ ತಂದೆಗೆ ಹೀಗೆ ಕೇಳುವಳು; "ಅವಳು ಅಷ್ಟೊಂದು ಸಂಕಟದಲ್ಲಿ ಸಾಯುತ್ತಿರುವುದು ಸಂತೋಷವಾಗಿ ನಗುನಗುತ್ತಾ ಸಾಯಬೇಕೆ? ಅವಳ ತಾಯಿ ಸಿಹಿ ಹಂಚಬೇಕೆ? ನಿಮ್ಮ ಮಾತೇ ನನಗರ್ಥವಾಗುವುದಿಲ್ಲ" ಎಂದೆ. ಅವರು ಮುಗುಳುನಕ್ಕರು. "ಸಬಾ... ಬದುಕು ಅಗಾಧವಾದುದು, ನಿರಂತರವಾದುದು, ನಮ್ಮ ಪಾತ್ರ ನಿರ್ವಹಿಸುವುದಷ್ಟಕ್ಕೆ ಮಾತ್ರ ನಾವು ಸೀಮಿತರು. "ಹಾಗಿದ್ದರೆ... ಯೋಚನೆ ಮಾಡು... ಸಾವು ಬದುಕಿನ ಅಂತ್ಯವೋ ಅಥವಾ ಆರಂಭವೋ...?" ನನಗೆ ತಬ್ಬಿಬ್ಬಾಯಿತು. "ಸಾವು ಬದುಕಿನ ಅಂತ್ಯ". "ಹಾಗಾದರೆ... ಎಲ್ಲಾ ಧರ್ಮಗಳೂ ಒಂದಲ್ಲ ಒಂದರ್ಥದಲ್ಲಿ ಪ್ರತಿಪಾದಿಸುವ ಮೋಕ್ಷ ಅಥವಾ ಮುಕ್ತಿಯ ಆರಂಭ ಯಾವುದು...?" "ಸಾವು..." ಎಂದೆ ನನಗರಿವಿಲ್ಲದಂತೆ. "ಅಥವಾ... ಹೀಗೇ ಯೋಚಿಸೋಣ, ಧರ್ಮಗಳಲ್ಲಿ ನಂಬಿಕೆ ಇಲ್ಲದವರಿಗೆ ಸಾವೆಂದರೆ ಏನು? "ಬದುಕಿನ ಕೊನೆ". ಅದು ಯಾಕೋ ಜಟಿಲವಾಯಿತು. ಅವರು ತುಸುವೇ ನಕ್ಕರು. "ನೋಡು ಮಗಳೇ... ಸಾವು ಬದುಕಿನ ಆರಂಭವೋ... ಅಂತ್ಯವೋ ಇದೊಂದು ಜಿಜ್ಞಾಸೆ. ಅದರ ಧಾರ್ಮಿಕತೆಯ ಬಗ್ಗೆ ನಾನು ಚರ್ಚಿಸುವುದಿಲ್ಲ, ಆದರೆ... ಸಾವು ಎನ್ನುವುದು ನಾವುಗಳೆಲ್ಲಾ ಒಪ್ಪಿಕೊಳ್ಳಲೇಬೇಕಾದ ಅನಿವಾರ್ಯ ವಾಸ್ತವತೆಯಲ್ಲವೇ?" "ಹೌದು..." "ಹಾಗಿದ್ದರೆ... ಸಾವನ್ನು ಎದುರಿಸಬೇಕು ಎಂಬ ಭೀತಿ ನಮಗೆ ಯಾಕೆ...? "ಅಂದರೆ... ಸಾವನ್ನು ಬರಮಾಡಿಕೊಳ್ಳಬೇಕು ಎಂಬುದು ನಿಮ್ಮ ಅಭಿಪ್ರಾಯವೇ? "ಇಲ್ಲ ಸಾವನ್ನು ಅಪೇಕ್ಷಿಸಬಾರದು. ಆದರೆ ಸಾವು ಶತಃಸಿದ್ಧ. ಒಂದಲ್ಲ ಒಂದು ದಿನ

ನಾವು ಅದರೊಡನೆ ಮುಖಾಮುಖಿಯಾಗುತ್ತೇವೆ. ಸಾವನ್ನು ಎದುರಿಸಬೇಕು ಎಂಬುದು ನಮಗೆ ಬದುಕಿನಲ್ಲಿ ಸಿಗುವ ಪ್ರಿಪರೇಷನ್. ನಾವು ಎದುರಿಸಬೇಕು ಎಂಬರ್ಥದಲ್ಲಿ ಸಿದ್ಧವಾಗುವುದು ಯುದ್ದದಲ್ಲಿ ; ಶತ್ರುಗಳೊಡನೆ ಸಾವು ನಮಗೆ ಸ್ನೇಹಿತನೂ ಅಲ್ಲ, ಶತ್ರುವೂ ಅಲ್ಲ, ಅಂತ್ಯವೂ ಅಲ್ಲ, ಆರಂಭವೂ ಅಲ್ಲ. ಅದು ಕೂಡ ಬದುಕಿನಂತೆ ಒಂದು ಪ್ರಕ್ರಿಯೆ. ಅದನ್ನು ನಾವು ಎದುರಿಸಲು ಸಿದ್ಧತೆ ಮಾಡಿಕೊಳ್ಳಬೇಕಾದ್ದಿಲ್ಲ. ಬದಲಿಗೆ ಅದನ್ನು ಅನುಭವಿಸಬೇಕು." ಒಟ್ಟು ಅಪ್ಪ ಹೇಳಿದ ಈ ಮಾತುಗಳ ಮರ್ಮ ಇಷ್ಟೇ; ಸಾವು ಈ ಜೀವನದಲ್ಲಿ ಒಪ್ಪಿಕೊಳ್ಳಲೇಬೇಕಾದ ಕಠೋರ ಸತ್ಯ, ವಾಸ್ತವ. ಅಪ್ಪ ಮಗಳ ಮಧ್ಯದ ಸಂಭಾಷಣೆಯ ಮೂಲಕ ಬಾನು ಮುಷ್ತಾಕ್ ಸಾವಿನ ಸತ್ಯವನ್ನು ಸ್ಪಷ್ಟಪಡಿಸುತ್ತಾರೆ. ಅಲ್ಲದೆ, "ನಾವು ಬಯಕೆಗಳಿಗೆ ತಕ್ಕಂತೆ ಬದುಕುವುದು ಸುಲಭ. ಆದರೆ, ಜೀವನ ನಮ್ಮ ಆಳತೆಗೆ ತಕ್ಕಂತೆ ಕತ್ತರಿಸಿ ಹೊಲಿಯುವ ಬಟ್ಟೆಯಲ್ಲ. ಸಬಾ... ನೀನು ಅರ್ಥ ಮಾಡಿಕೋಬೇಕು ಮಗಳೆ" ಎಂಬ ಮಾತು ಬಾಳಿನ ಮರ್ಮವನ್ನು ತಿಳಿಸುತ್ತದೆ. ಜೀವನದಲ್ಲಿ ಸುಖಕ್ಕೆ ಹಾತೊರೆಯುವ ಮನುಷ್ಯ ದುಃಖಕ್ಕೇಕೆ ಹೆದರುತ್ತಾನೆ? ನೋವಿಗೆ ನರಮ್ ಆಗುತ್ತಾನೆ. ಈ ಸತ್ಯವನ್ನು ಅಬ್ಬಾಜಾನರು "ಬದುಕಿನ ಸುಖಗಳನ್ನು ನಾವು ಅನುಭವಿಸುವಂತೆ ದುಃಖಗಳನ್ನೇಕೆ ಅನುಭವಿಸುವುದಿಲ್ಲ? ಸಿಹಿಯನ್ನು ತಿಂದು ಸಂತೋಷ ಪಡುವವರು ಕಹಿ ಒಂಚೂರು ನಾಲಿಗೆಗೆ ತಾಕಿದ ಕೂಡಲೇ ಸಿಂಡರಿಸುವುದೇಕೆ? ಅದನ್ನು ನಿರಾಕರಿಸುವುದೇಕೆ? ಅದನ್ನು ಅನುಭವಿಸಲೇಬೇಕಾದ ಅನಿವಾರ್ಯತೆ ಒಂದೆಡೆ... ಆದರೆ ನಿರಾಕರಣೆ ಇನ್ನೊಂದಡೆ... ಇದರಿಂದ ಹೆಚ್ಚು ಒತ್ತಡ ಮತ್ತು ಹೆಚ್ಚು ದುಃಖ..." "...ಈ ಮಾತು ನಿನಗೇ ಹೆಚ್ಚು ಅರ್ಥವಾಗಬೇಕು ಮಗಳೇ... ನೋಡು ನಿನಗೆ ಹೆರಿಗೆ ನೋವು ಬರುತ್ತದೆ. ನೋವಿನ ಆ ವಿಸ್ತೃತವಾದ ಅಲೆಗಳಿಂದ ನೀನು ತಪ್ಪಿಸಿಕೊಳ್ಳುವುದಿಲ್ಲ. ನೋವು ಬಾರದೆ ಇರಲಿ ಎಂದು ಬಯಸುವುದಿಲ್ಲ. ಹೌದೋ... ಅಲ್ಲವೋ... ನೋವು ಬರಲಿ... ಆಳವಾದ ನೋವು ಬರಲಿ ಎಂದು ಬಯಸುತ್ತೀಯ. ಏಕೆಂದರೆ... ಪ್ರತಿಯೊಂದು ನೋವಿನ ಆಳ ವಿಸ್ತಾರಗಳಲ್ಲೂ ನಿನ್ನ ಮಗುವಿನ ಜನನದ ನಿರೀಕ್ಷೆ ನಿನಗಿರುತ್ತದೆ. ಈ ನೋವಿನ ಪ್ರಕ್ರಿಯೆಯನ್ನು ನೀನು ವಿರೋಧಿಸುವುದಿಲ್ಲ. ಬದಲಿಗೆ... ಆ ಪ್ರಕ್ರಿಯೆಯಲ್ಲಿ ನಿನ್ನ ದೇಹ, ಬುದ್ಧಿ, ಭಾವದೊಂದಿಗೆ ಒಂದಾಗುತ್ತೀಯಾ. ನೋವಿನ ಪ್ರತಿಯೊಂದು ಕ್ಷಣವನ್ನು ನೀನು ಅನುಭವಿಸುತ್ತೀಯ. ಮಗುವಿನ ಜನ್ಮವಾದ ಕೂಡಲೇ ನಿನ್ನ ನೋವುಗಳು ಮಾಯವಾಗುತ್ತದೆ..." ಅಪ್ಪ ಮಗಳ ನಡುವಿನ ಈ ನುಡಿಗಳು ಜನನ–ನೋವು–ಮರಣಗಳ ಕುರಿತ ಮೀಮಾಂಸೆಯಾಗಿದೆ. ಬಾನು ಮುಷ್ತಾಕ್ ಅವರು ಸಬಾಳ ಮೂಲಕ ತಂದೆಯಲ್ಲಿನ ಆರ್ದ್ರತೆಯನ್ನು ಕಾಣಿಸುತ್ತಾರೆ. ಪ್ರತಿ ಘಳಿಗೆಯಲ್ಲೂ ಕುಗ್ಗದಂತೆ ಧೈರ್ಯ ತುಂಬುವ ಅಪ್ಪ ಅಬ್ಬಾಜಾನ್ ಬಗ್ಗೆ ಸಬಾ ಆಡುವ "ಆಬ್ಬಾ... ನಿಮ್ಮಿಂದಲೇ ನಾನು ಕಲಿತದ್ದು "ಮಮತೆ ಹೆಣ್ಣಿನ ಗುತ್ತಿಗೆಯಲ್ಲ ಎಂಬುದು". ಇದು ಆಳದ ಅಂತಃಕರಣದ ವಾತ್ಸಲ್ಯಾಪೇಕ್ಷಿತ ಎಲ್ಲ ಹೆಣ್ಣುಮಕ್ಕಳ ಅಭಿವ್ಯಕ್ತಿ. ತಾಯ್ತನವನ್ನು ತಂದೆತನದಲ್ಲಿ ಕಾಣುವ ವಿಶಾಲ ಹೃದಯದ ಸ್ತ್ರೀ ಸಂವೇದನೆಯು ಇಲ್ಲಿ ಢಾಳವಾಗಿ ಕಾಣಿಸುತ್ತದೆ.

**ಕಥೆಯ ರಾಚನಿಕತೆ**

ಕಥೆಯನ್ನು ಹೇಳುವ ಶೈಲಿ, ಭಾಷೆ, ಸರಳವಾಗಿದ್ದು ಧ್ವನಿಪೂರ್ಣವಾಗಿದೆ. ಚಿಂತನೆಗೆ ಹಚ್ಚುವ ಕೆಲವು ಸಂದರ್ಭದ ಮಾತುಗಳಲ್ಲಿ ಭಾಷೆಯಲ್ಲಿ ಮೌನವನ್ನು ಮೂರ್ತೀಕರಿಸಿರುವುದು ಬಾನು ಮುಷ್ತಾಕ್‌ರ ಕಥನ ಕಲೆಯ ಹೆಚ್ಚುಗಾರಿಕೆ. ಭ್ರಾಂತಿಗೊಳಗಾದ ಸ್ಥಿತಿಯಲ್ಲಿರುವ ಸಬಾಳ ಪಾತ್ರವು ಹೆಚ್ಚು ಕಾಡುತ್ತದೆ. ಅಪ್ಪ ಅಬ್ಬಾಜಾನ್‌ನ ಬೋಧೆಯು ಬಾಳಿಗೆ ಬೆಳಕಿನಂತಿದೆ. ನಿಸರ್ಗದ ಭಯಾನಕತೆಯೊಂದಿಗೆ ಮನಸ್ಸಿನಲ್ಲಿನ ಭಯವೇ ಹೆಚ್ಚು ವ್ಯಕ್ತಿಯನ್ನು ಆಘಾತಕ್ಕೊಳಪಡಿಸುತ್ತದೆ

ಎಂಬುದು ನಿಜ. ಇದಕ್ಕೆ ಸಾಕ್ಷಿ ಸಬಾಳ ಪಾತ್ರ ಚಿತ್ರಣ. ತಂದೆಯ ವಾತ್ಸಲ್ಯ, ಮಮತೆ, ಮಾನವೀಯತೆಯನ್ನು ಹಾಗೇ ಅವನ ಸಾವನ್ನು; ಸಾವಿನ ಬಗೆಗಿನ ಚಿಂತನೆಯನ್ನೂ ಧ್ಯಾನಿಸುವ ಕಥೆಯು ಓದುಗರನ್ನು ಆಲೋಚನೆಗೆ ಹಚ್ಚುತ್ತದೆ. ಮೂತ್ರಪಿಂಡ ಕಾಯಿಲೆಯಿಂದ ಬಳಲಿ ಸಾವಿಗೀಡಾಗುವ ಹುಡುಗಿಯ ಘಟನೆಯೊಂದು ಕಥೆಗೆ ಪೂರಕವಾಗಿ, ಕಥೆಯ ಪರಿಣಾಮದ ತೀವ್ರತೆಯ ತಂತ್ರವಾಗಿ ಮೂಡಿಬಂದಿದೆ. ಕಥೆಯ ಆರಂಭ ಮತ್ತು ಅಂತ್ಯ ಆಶಾವಾದವನ್ನು ಪ್ರಕಟಿಸುತ್ತದೆ. “ಬಾನು ಅವರ ಕಥನದ ಮಾದರಿ ಯಾವುದು? ಕನ್ನಡ ಕಥನದಲ್ಲಿ ಮೂರು ಮಾದರಿಗಳಿವೆ. ಇವನ್ನು ಕತೆಯನ್ನು ಹೇಳುವ ಕಟ್ಟುವ ಮತ್ತು ಸೃಷ್ಟಿಸುವ ಕ್ರಮಗಳು ಎಂದು ಕರೆಯಬಹುದು. ಕತೆ ಕಟ್ಟುವ ಮಾದರಿಯಲ್ಲಿ ಪೂರ್ವಕಲ್ಪಿತ ತಾತ್ವಿಕ ಪ್ರಮೇಯಗಳು ಕಥನರೂಪವನ್ನು ಧರಿಸಲು ಯತ್ನಿಸುತ್ತವೆ. ನಿರ್ದಿಷ್ಟ ಆಶಯವನ್ನು ಅಲ್ಲಿ ಜೋಡಿಸುತ್ತವೆ. .....ಮೂರನೆಯದು ಕತೆಯನ್ನು ನಿರಾಳವಾಗಿ ಹೇಳುತ್ತಾ ಹೋಗುವ ಜನಪದೀಯ ಕ್ರಮ. ಆ ಸರಳವಾದ ಹೇಳುವಿಕೆ ಅಥವಾ ನಿರೂಪಿಸುವಿಕೆಯಲ್ಲೇ ಸಮುದಾಯದ ಅಥವಾ ಪರಿಸರದ ಸುಖ–ದುಃಖಗಳನ್ನು ಹುದುಗಿಸಲಾಗುತ್ತದೆ. ತಮ್ಮ ಸಮುದಾಯದ ಬದುಕನ್ನು ಕಟ್ಟಿಕೊಡುವ ದಲಿತರು ಆದಿವಾಸಿಗಳು ಮುಸ್ಲಿಮರು ಮಹಿಳೆಯರು ಸಾಮಾನ್ಯವಾಗಿ ಈ ಮಾದರಿಯನ್ನು ಅನುಸರಿಸುವರು. ಬಾನು ಅವರ ಕಥನದ ಮಹತ್ವವೆಂದರೆ ಅದು ದಮನಿತ ಎನ್ನಲಾಗುವ ಪಾತ್ರಗಳಲ್ಲಿ ಇರುವ ಅದಮ್ಯ ಚೈತನ್ಯವನ್ನು ಗುರುತಿಸುತ್ತವೆ. ಇದೊಂದು ಬಗೆಯಲ್ಲಿ ಬುದ್ಧನ ಪ್ರಜ್ಞೆಯ ಎಚ್ಚರವನ್ನೂ ಕರುಣೆ ಮೈತ್ರಿಗಳ ಅಂತಃಕರಣವನ್ನೂ ಒಳಗೊಂಡಿರುವ ಕಥನ ಮಾದರಿ”[2] ಎಂದಿರುವ ರಹಮತ್ ತರೀಕೆರೆಯವರ ಮಾತು ಸಾವು ಕಥೆಯ ಸಬಾಳಿಗೆ ನೇರವಾಗಿ ಅನ್ವಯವಾಗುತ್ತದೆ.

**ಸಮಾರೋಪ**

ಭಾರತದ ಪಿತೃಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣುಮಗಳು ತನ್ನ ತಂದೆಯಲ್ಲಿ ತಾಯ್ತನವನ್ನು ಹುಡುಕುವುದು ಸಹಜವೇ. ತಂದೆ ಮಗಳ ಬಾಂಧವ್ಯವನ್ನು ಅರುಹುವ ‘ಸಾವು’ ಕಥೆಯಲ್ಲಿ ಮುಖ್ಯಪಾತ್ರವಾಗಿರುವ ಸಬಾಳನ್ನು ಅಪ್ಪನ ಅಗಲಿಕೆಯ ಚಿಂತೆ ಸಾವಿನ ದವಡೆಗೆ ತಳ್ಳಿದೆ. ಕಾನನದ ರಮಣೀಯತೆ, ಭೀಕರತೆ, ಭಯಾನಕತೆಯ ಸನ್ನಿವೇಶದಲ್ಲಿ ನೀರಿನ ಝರಿಯನ್ನು ಎದುರುಗೊಂಡು ಹೋಗುವ ಸಬಾಳು ದೂರದ ಕಮಂಡಲ ವೇಷಧಾರಿಯಾಗಿರುವ ಋಷಿಯನ್ನು ಕಾಣುವ ಹಂಬಲದೊಂದಿಗೆ ಕಥೆ ಆರಂಭವಾಗಿ; ತೀರಿಕೊಂಡ ತಂದೆಯ ಬಳಿಗೆ ಶಾಶ್ವತವಾಗಿ ತಾನೂ ಹೋಗುವ ಅನಿವಾರ್ಯತೆಗಿಂತ ಜೊತೆಗಿರುವ ಮಗನಿಗಾಗಿ ಬದುಕುವ ಅಗತ್ಯವನ್ನು ಪ್ರತಿಪಾದಿಸುವ ಆಶಾವಾದದ ಕಥೆಯಿದು.

ಕೋಮುವಾದ ಮತೀಯವಾದ ತಾಂಡವವಾಡುತ್ತಿರುವ ಇಂದಿನ ಭಾರತೀಯ ಸಾಮಾಜಿಕ ಸನ್ನಿವೇಶದಲ್ಲಿ ಬಾನು ಮುಷ್ತಾಕ್ ಅವರ ಕಥೆಗಳು ಹೆಣ್ಣಿನ ತಲ್ಲಣ ತಳಮಳ ಸಂಕಟ ಸಂಘರ್ಷಗಳನ್ನು ಕಟ್ಟಿಕೊಡುವುದರ ಜೊತೆಗೆ ಮಾನವೀಯ ಸಮಾಜ ನಿರ್ಮಾಣದ ಆಶಯವನ್ನು ವ್ಯಕ್ತಪಡಿಸುತ್ತ ಬಂದಿರುವುದು ವೇದ್ಯ ಸಂಗತಿ. ಸಾವು ಕಥೆಯಲ್ಲಿಯೂ ಅಪ್ಪ ಅಬ್ಬಾಜಾನ್ ಕಮಂಡಲ ವೇಷಧಾರಿಯಾಗಿ ಕಾಣುವುದು ಧಾರ್ಮಿಕ ಸಾಮರಸ್ಯ, ಸೌಹಾರ್ದತೆಯ ಸಂಕೇತವಾಗಿದೆ. ಬಾನು ಮುಷ್ತಾಕ್ ಅವರ ಒಟ್ಟು ಕಥೆಗಳ ಆಶಯವೇ ಬದುಕಿನ ಆಶಾವಾದ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಕುರಾನ್‌ನ ಶ್ಲೋಕ, ಧರ್ಮ, ಬಾಳಿನ ಮರ್ಮ, ಮನುಷ್ಯ ಸಂಬಂಧಗಳ ಕುಟಿಲತೆ, ಸಾವು ತಂದೊಡ್ಡುವ ದುರಂತ, ಸಾವಿನ ಅನಿವಾರ್ಯತೆಯೊಂದಿಗೆ ಬದುಕನ್ನು ಎದುರುಗೊಳ್ಳುವ ಆಶಾವಾದದಲ್ಲಿಯೇ ‘ಸಾವು’ ಕಥೆ ಮರುಹುಟ್ಟು ಪಡೆದಿದೆ. ಜನನ–ಜೀವನ ಕುರಿತು

ತಾತ್ವಿಕತೆಯನ್ನು ತಣ್ಣನೆಯ ದನಿಯಲ್ಲಿ ಮಂಡಿಸುವ 'ಸಾವು' ಕಥೆ ಓದುಗನ ಎದೆಯಲ್ಲಿ ಸದಾ ಬದುಕುಳಿಯುತ್ತದೆ.

**ಆಕರ**

- ಚಿಲುಮೆ–ವೆಬ್ ಮ್ಯಾಗಜಿನ್ ನಲ್ಲಿ ಮಾರ್ಚ್ 22, 2020 ರಲ್ಲಿ ಪ್ರಕಟಿತ ಕಥೆ

**ಕೊನೆಟಿಪ್ಪಣಿ**


1. ಅರುಣ್ ಜೋಳದ ಕೂಡ್ಲಿಗಿ. (2025, ಜೂನ್ 8). *ಸಂವಾದ ಮಾಸಪತ್ರಿಕೆ.* 23,(8).
2. ರಹಮತ್ ತರೀಕೆರೆ. (2025, ಜೂನ್). *ನ್ಯಾಯಪಥ.*